**P.G.R. SINDHIA,** B.E. (Civil)
STATE CHIEF COMMISSIONER
Former Minister for Health, Finance,
Home, Industries & Transport
Government of Karnataka

State Headquarters
No. 39, "Shanthigruha"
Palace Road
Bengaluru-560 001

# ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# THE BHARAT SCOUTS & GUIDES, KARNATAKA

Ref : BSG/SHQ/1285/2025-26 Date : 10-10-2025

ಮಾನ್ಯರೆ,

ವಿಷಯ:- 2025-26ನೇ ಸಾಲಿನ ಸರ್ಕಾರಿ, ಅನುದಾನಿತ, ಅನುದಾನರಹಿತ ಕಿರಿಯ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕ/ಶಿಕ್ಷಕಿಯರಿಗೆ ಅಕ್ಟೋಬರ್- ನವೆಂಬರ್ 2025 ಮಾಹೆಯ ಅಂತ್ಯದೊಳಗೆ ಒಂದು ದಿನದ ಪ್ರಾರಂಭಿಕ ತರಬೇತಿ ಶಿಬಿರಕ್ಕೆ ದಿನಾಂಕವನ್ನು ನಿಗಧಿಪಡಿಸಿ ಸಂಘಟಿಸಿ ನಡೆಸುವ ಬಗ್ಗೆ.

******

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಸಂಸ್ಥೆಯು ಪ್ರಪಂಚದಾದ್ಯಂತ ವ್ಯಾಪಿಸಿರುವ ಏಕರೀತಿಯ ಸಮವಸ್ತ್ರವನ್ನು ಹೊಂದಿರುವ ಏಕೈಕ ಚಳವಳಿ. ಈ ಸಂಸ್ಥೆಯು ಯುವಜನರಲ್ಲಿ ದೇಶಾಭಿಮಾನ, ಸೇವೆ, ಕ್ರಿಯಾಶೀಲತೆ, ಕ್ರೀಡಾಮನೋಭಾವ, ಸಚ್ಚಾರಿತ್ರ್ಯ, ಜೀವನ ಕೌಶಲ್ಯ ಮತ್ತು ನಾಯಕತ್ವ ಗುಣವನ್ನು ಕಲಿಸುವ, ಸರ್ವಧರ್ಮಗಳ ತಿರುಳನ್ನು ಸಾರುವ ಹಾಗೂ ಶಿಸ್ತಿನ ನಾಗರೀಕರನ್ನು ಬೆಳೆಸುವ ಒಂದು ಅಂತರರಾಷ್ಟ್ರೀಯ ಯುವ ಚಳವಳಿಯಾಗಿದೆ.

ತರಬೇತಿ ಹೊಂದದ ಶಾಲಾ – ಕಾಲೇಜುಗಳಲ್ಲಿ ಕಬ್/ಬುಲ್‌ಬುಲ್, ಸ್ಕೌಟ್/ಗೈಡ್ ದಳಗಳನ್ನು ತೆರೆದು ವಿದ್ಯಾರ್ಥಿಗಳಿಗೆ ಕಬ್/ಬುಲ್‌ಬುಲ್, ಸ್ಕೌಟ್/ಗೈಡ್ ಪ್ರಗತಿ ಪರ ತರಬೇತಿ ನೀಡುವಂತೆ ಸರಕಾರಿ ಆದೇಶವಿದ್ದು ಇದರಂತೆ ತಮ್ಮ ಜಿಲ್ಲೆಯ ವ್ಯಾಪಿಯಲ್ಲಿ ಬರುವ ಸರ್ಕಾರಿ, ಅನುದಾನಿತ, ಅನುದಾನರಹಿತ ಕಿರಿಯ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಕನಿಷ್ಟ 50 ಶಿಕ್ಷಕ/ಶಿಕ್ಷಕಿಯರಿಗೆ ಅಕ್ಟೋಬರ್ – ನವೆಂಬರ್ 2025 ಮಾಹೆಯ ಅಂತ್ಯದೊಳಗೆ ಒಂದು ದಿನದ ಪ್ರಾರಂಭಿಕ ತರಬೇತಿ ಶಿಬಿರವನ್ನು ಪ್ರತಿ ತಾಲ್ಲೂಕು ಮಟ್ಟದಲ್ಲಿ ಆಯೋಜಿಸಲು ಕೋರುತ್ತೇವೆ. ಈ ಬಗ್ಗೆ ಜಿಲ್ಲಾ/ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು/ಸಂಘಟಕರು ತಮ್ಮನ್ನು ಸಂಪರ್ಕಿಸಿ ತಾವು ನೀಡುವ ದಿನಾಂಕದಂದು ಪ್ರಾರಂಭಿಕ ಶಿಬಿರವನ್ನು ಆಯೋಜಿಸುವರು.

ಒಂದು ದಿನದ ಪ್ರಾರಂಭಿಕ ಶಿಬಿರಕ್ಕೆ ತಮ್ಮ ಜಿಲ್ಲೆಯ ವ್ಯಾಪಿಯಲ್ಲಿ ಬರುವ ಸರ್ಕಾರಿ, ಅನುದಾನಿತ, ಅನುದಾನರಹಿತ ಕಿರಿಯ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಇದುವರೆವಗೂ ತರಬೇತಿಯನ್ನು ಹೊಂದದೆ ಇರುವ ಶಿಕ್ಷಕ/ಶಿಕ್ಷಕಿಯವರನ್ನು ನಿಯೋಜಿಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ. ಹಾಗೂ ಈಗಾಗಲೇ ತರಬೇತಿಯನ್ನು ಹೊಂದಿದ ಶಿಕ್ಷಕ/ಶಿಕ್ಷಕಿಯವರನ್ನು ಒಂದು ದಿನದ ಪುನಶ್ಚೇತನ ಶಿಬಿರದಲ್ಲಿ ಭಾಗವಹಿಸುವಂತೆ ಸೂಕ್ತ ಆದೇಶ ನೀಡಲು ವಿನಂತಿಸುತ್ತೇನೆ.

ಪು.ತಿ.ನೋ

Ph. (Off) : 080-22343400, 22267470
Res.: 080-26582711, 26586725
info@bsgkarnataka.org
www.bsgkarnataka.org
Mob : 09845371958
pgrsindhia@gmail.com

ಪ್ರತಿಯೊಬ್ಬರಿಗೆ ಶಿಬಿರದ ಶುಲ್ಕ ಮತ್ತು ಘಟಕ ನೊಂದಾವಣಿ ಶುಲ್ಕಗಳನ್ನು ಈ ಕೆಳಕಂಡಂತೆ ಭರಿಸುವ ವ್ಯವಸ್ಥೆ ಮಾಡುವುದು.

| | |
|---|---|
| ಶಿಬಿರದ ನೊಂದಣಿ ಶುಲ್ಕ | ರೂ. 150/- |
| ಕಬ್/ಫ್ಲಾಕ್ ನೊಂದಣಿ ಶುಲ್ಕ | ರೂ. 98/- |
| ಸ್ಕೌಟ್/ಗೈಡ್ ನೊಂದಣಿ ಶುಲ್ಕ | ರೂ. 242/- |

ಶಿಬಿರ ಶುಲ್ಕ ಮತ್ತು ಘಟಕ ನೊಂದಾವಣಿ ಶುಲ್ಕವನ್ನು ಶಿಕ್ಷಕರು ತರಬೇತಿಗೆ ಹಾಜರಾಗುವ ಸಂದರ್ಭದಲ್ಲಿ ಪಾವತಿಸಬೇಕಾಗಿರುತ್ತದೆ. ಈ ಅಭ್ಯರ್ಥಿಗಳು ಶಿಬಿರಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚ, ಶಿಬಿರ ಶುಲ್ಕ ಮತ್ತು ಘಟಕ ನೊಂದಾವಣಿ ಶುಲ್ಕವನ್ನು ಶಾಲೆಗಳ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಾಲ್ತಿ ಅಥವಾ ಸಂಚಿತ ನಿಧಿಯಿಂದ ಭರಿಸಲು ಮತ್ತು ಆ ದಿನದ ಗೈರು ಹಾಜರಿಯನ್ನು ಅನ್ಯ ಕಾರ್ಯನಿಮಿತ್ತ ಎಂದು ಪರಿಗಣಿಸಿ ನಿಯೋಜಿಸಬೇಕಾಗಿ ಕೋರಿದೆ.

ಸ್ಕೌಟ್ ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್.ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಉಪನಿರ್ದೇಶಕರು
ಶಾಲಾ ಶಿಕ್ಷಣ ಇಲಾಖೆ
__________________ಜಿಲ್ಲೆ.

ಪ್ರತಿಯನ್ನು ಮಾಹಿತಿಗಾಗಿ
1. ಮಾನ್ಯ ರಾಜ್ಯ ಆಯುಕ್ತರು (ಸ್ಕೌಟ್ಸ್) & (ಗೈಡ್ಸ್), ಭಾ. ಸ್ಕೌ & ಗೈ ಕರ್ನಾಟಕ
2. ಮಾನ್ಯ ರಾಜ್ಯ ಆಯುಕ್ತರು (ಸ್ಕೌಟ್ಸ್) & (ಗೈಡ್ಸ್), (ವ.ಸಂ), ಭಾ. ಸ್ಕೌ & ಗೈ ಕರ್ನಾಟಕ
3. ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಆಯುಕ್ತರು (ಸ್ಕೌಟ್ & ಗೈಡ್) ಭಾ. ಸ್ಕೌ & ಗೈ ಕರ್ನಾಟಕ
4. ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್ಸ್) & (ಗೈಡ್ಸ್)
5. ಎ.ಎಸ್.ಒ.ಸಿ/ಡಿ.ಒ.ಟಿ/ಡಿ.ಒ/ಎಸ್.ಜಿ.ವಿ/ಎಸ್.ಜಿ.ಎ ಭಾ. ಸ್ಕೌ & ಗೈ
6. ಕಛೇರಿ ಪ್ರತಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ